# D

**CCE PR**
**UNREVISED**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಮಾರ್ಚ್ / ಏಪ್ರಿಲ್, 2019**

**S.S.L.C. EXAMINATION, MARCH / APRIL, 2019**

## ಮಾದರಿ ಉತ್ತರಗಳು

## MODEL ANSWERS

ದಿನಾಂಕ : 27. 03. 2019 ] **ಸಂಕೇತ ಸಂಖ್ಯೆ : 33-K**

Date : 27. 03. 2019 ] **CODE NO. : 33-K**

# ವಿಷಯ : ದ್ವಿತೀಯ ಭಾಷೆ — ಕನ್ನಡ

# Subject : Second Language — KANNADA

**(ಹಳೆ ಪಠ್ಯಕ್ರಮ / Old Syllabus)**

**(ಪುನರಾವರ್ತಿತ ಖಾಸಗಿ ಅಭ್ಯರ್ಥಿ / Private Repeater)**

**[ ಗರಿಷ್ಠ ಅಂಕಗಳು : 100**

**[ Max. Marks : 100**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಎ'** | |
| | **ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ :** | |
| | (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿ ಉತ್ತರಕ್ಕೆ ಒಂದು ಅಂಕ) | 14 × 1 = 14 |
| 1. | ವಿಷದ ಬಾಣವು ಮರಕ್ಕೆ ತಗುಲಿದ್ದರಿಂದಾದ ಪರಿಣಾಮವೇನು ? | |
| | *ಉತ್ತರ :* | |
| | ವಿಷದ ಬಾಣವು ಮರಕ್ಕೆ ತಗುಲಿದ ಪರಿಣಾಮದಿಂದ ಮರ ಒಣಗಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 2. | ಇಂದ್ರನಿಗೆ ಆಶ್ಚರ್ಯವಾದದ್ದು ಏಕೆ ?<br>***ಉತ್ತರ :***<br>ಮರ ಒಣಗಿ ನಿಂತರೂ ಆ ಮರದ ಪೊಟರೆಯಲ್ಲಿ ವಾಸಮಾಡುತ್ತಿದ್ದ ಗಿಳಿಯನ್ನು ಕಂಡು ಇಂದ್ರನಿಗೆ ಆಶ್ಚರ್ಯವಾಯಿತು. | |
| 3. | ಸಾಧನೆಗೆ ಅವಶ್ಯಕವಾದುದು ಯಾವುದು ?<br>***ಉತ್ತರ :***<br>ಏಕಾಗ್ರತೆ, ಚುರುಕುತನ, ತತ್‌ಕ್ಷಣದಲ್ಲಿ ಪ್ರತಿಕ್ರಿಯಿಸುವಿಕೆ, ಅರ್ಪಣಾ ಮನೋಭಾವಗಳು ಸಾಧನೆಗೆ ಅವಶ್ಯಕ. | |
| 4. | ಭಾರತೀಯ ಸಂಗೀತದ ಎರಡು ಶೈಲಿ ಯಾವುದು ?<br>***ಉತ್ತರ :***<br>ಹಿಂದೂಸ್ಥಾನಿ ಸಂಗೀತ ಮತ್ತು ಕರ್ನಾಟಕ ಶಾಸ್ತ್ರೀಯ ಸಂಗೀತಗಳು ಭಾರತೀಯ ಸಂಗೀತದ ಎರಡು ಶೈಲಿಗಳು. | |
| 5. | ಕಲಿಕೆಗೆ ಮುಖ್ಯವಾಗಿ ಇರಬೇಕಾದುದು ಯಾವುದು ?<br>***ಉತ್ತರ :***<br>ಸತತ ಪರಿಶ್ರಮ ಮತ್ತು ಶ್ರದ್ಧೆ ಕಲಿಕೆಗೆ ಮುಖ್ಯವಾಗಿ ಇರಬೇಕು. | |
| 6. | ಅಜ್ಜ ಕಾಯಿದೆಯನ್ನು ಮೀರಲು ಕಾರಣವೇನು ?<br>***ಉತ್ತರ :***<br>ಅಜ್ಜನ ಹೃದಯದಲ್ಲಿದ್ದ ಪ್ರೀತಿ ಕಾಯಿದೆಯನ್ನು ಮೀರಲು ಕಾರಣವಾಯಿತು. | |
| 7. | ರಾಮನ್‌ರವರು ಯಾರನ್ನು ಕಠಿಣ ಪರೀಕ್ಷೆಗೆ ಒಳಪಡಿಸುತ್ತಿದ್ದರು ?<br>***ಉತ್ತರ :***<br>ರಾಮನ್‌ರವರು ತಮ್ಮ ಬಳಿ ಶಿಷ್ಯವೃತ್ತಿಯನ್ನು ಕೈಗೊಳ್ಳಲು ಬರುವ ವಿದ್ಯಾರ್ಥಿಗಳನ್ನು ಕಠಿಣ ಪರೀಕ್ಷೆಗೆ ಒಳಪಡಿಸುತ್ತಿದ್ದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 8. | ಬನದ ಗೋಪಾಲ ಯಾರು ? | |
| | *ಉತ್ತರ :* | |
| | ಬನದ ಗೋಪಾಲ ಶ್ರೀಕೃಷ್ಣ. | |
| 9. | ನಿತ್ಯದಾಸೋಹ ಎಂದರೇನು ? | |
| | *ಉತ್ತರ :* | |
| | ಮಹಾಮನೆಯಲ್ಲಿ ಪ್ರತಿನಿತ್ಯ ಶಿವಭಕ್ತರಿಗೆ ಮಾಡುವ ಆರೋಗಣೆಗೆ ನಿತ್ಯದಾಸೋಹ ಎನ್ನುವರು. | |
| 10. | ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನ ಪ್ರತಿಕ್ರಿಯೆ ಏನು ? | |
| | *ಉತ್ತರ :* | |
| | ಮಗುವಿನ ಮುಗ್ಧ ನಂಬಿಕೆಗೆ ಗೊಮ್ಮಟನು ನಕ್ಕುಬಿಟ್ಟನು. | |
| 11. | ತಿಮಿರಕ್ಕೆ ವೈರಿ ಯಾರು ? | |
| | *ಉತ್ತರ :* | |
| | ತಿಮಿರಕ್ಕೆ ವೈರಿ ಬೆಳಕು (ದೀಪ) | |
| 12. | ಮಕ್ಕಳ ಹಸಿವನ್ನು ಬಲ್ಲವರು ಯಾರು ? | |
| | *ಉತ್ತರ :* | |
| | ಮಕ್ಕಳ ಹಸಿವನ್ನು ಬಲ್ಲವರು ತಾಯಿ. | |
| 13. | ವೇಷ ಧರಿಸಿದ ಮೇಲೆ ಹೇಗಿರಬೇಕು ? | |
| | *ಉತ್ತರ :* | |
| | ವೇಷ ಧರಿಸಿದ ಮೇಲೆ ವೇಷದಂತೆ ಆಚರಣೆ ಇರಬೇಕು. | |
| 14. | ಕೌರವನ ಸೇನೆಯು ಉತ್ತರನಿಗೆ ಹೇಗೆ ಕಾಣಿಸಿತು ? | |
| | *ಉತ್ತರ :* | |
| | ಕೌರವನ ಸೇನೆಯು ಉತ್ತರನಿಗೆ ಸಾಗರದಂತೆ ಕಾಣಿಸಿತು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು :**<br>(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಸರಿ ಉತ್ತರಕ್ಕೆ ಎರಡು ಅಂಕಗಳು) | $15 \times 2 = 30$ |
| 15. | ಸಾಮಾನ್ಯವಾದ ಲೋಕವರ್ತನೆ ಯಾವುದು ?<br>***ಉತ್ತರ :***<br>ಸುಖ ಸಂಪತ್ತಿನ ಕಾಲದಲ್ಲಿ ಜತೆಗಿದ್ದು ದುರ್ಭರಗಳಿಗೆಯಲ್ಲಿ ಅವರನ್ನು ಬಿಟ್ಟು ಹೋಗುವುದು ಸಾಮಾನ್ಯವಾದ ಲೋಕ ವರ್ತನೆ. | |
| 16. | ಕರ್ನಾಟಕದ ಕ್ರಿಕೆಟ್ ಆಟಗಾರರ ಹಿರಿಮೆ ಎಂತಹುದು ?<br>***ಉತ್ತರ :***<br>ಬಿ.ಎಸ್. ಚಂದ್ರಶೇಖರ ಅವರ ಎಸೆತದ ವೇಗ ಮತ್ತು ಗೂಗ್ಲಿಯ ನೆನಪಾಗುತ್ತದೆ. ಜಿ.ಆರ್. ವಿಶ್ವನಾಥರು ಲೇಟ್‌ಕಟ್, ಸ್ಕ್ವೇರ್‌ಕಟ್‌ಗೆ ಹೆಸರು ಪಡೆದವರು. ಅನಿಲ್ ಕುಂಬ್ಳೆಯವರು ಒಂದು ಇನ್ನಿಂಗ್ಸ್‌ನ ಎಲ್ಲಾ ಹತ್ತು ಹುದ್ದರಿಗಳನ್ನು ಪಡೆದ ವಿಶ್ವದ ದ್ವಿತೀಯ ಎಸೆತಗಾರರು. ರಾಹುಲ್ ದ್ರಾವಿಡ್ ಅವರು 'ಗೋಡೆ' ಎಂದೇ ಖ್ಯಾತನಾಮರಾಗಿದ್ದಾರೆ. | |
| 17. | ಪಶ್ಚಿಮ ಘಟ್ಟಗಳ ಉತ್ಪನ್ನಗಳು ನಮ್ಮ ದಿನನಿತ್ಯದ ಬದುಕಿಗೆ ಹೇಗೆ ಸಹಕಾರಿಯಾಗಿವೆ ?<br>***ಉತ್ತರ :***<br>ನಮ್ಮ ಮನೆಯಲ್ಲಿರುವ ವಿದ್ಯುತ್ ದೀಪಗಳು, ಹೊರಗೆ ಸುರಿಯುವ ಜಡಿಮಳೆ, ತೇವತುಂಬಿದ ಗಾಳಿ, ನಾವು ಕುಡಿಯುವ ಬಿಸಿಯಾದ ಕಾಫಿ, ನಾವು ಬಳಸುವ ಸ್ಟೀಲ್ ವಸ್ತುಗಳು, ಲವಂಗ ಮಿಶ್ರಿತ ಅಡಿಕೆ ಪುಡಿ ಇವೆಲ್ಲವು ಪಶ್ಚಿಮ ಘಟ್ಟಗಳು ನಮಗ ನೀಡಿರುವ ಕೊಡುಗೆಯಾಗಿದೆ. ಇಷ್ಟೊಂದು ಪರಿಕರವಲ್ಲದೆ ನಾವು ಕುಳಿತ ಕುರ್ಚಿ; ಪುಸ್ತಕಗಳು ಹೀಗೆ ಒಂದಲ್ಲ ಒಂದು ರೀತಿಯಲ್ಲಿ ಪಶ್ಚಿಮ ಘಟ್ಟದ ಉತ್ಪನ್ನಗಳು ನಮ್ಮ ಬದುಕಿಗೆ ಸಹಕಾರಿಯಾಗಿವೆ. | |
| 18. | "ತಪ್ಪಾತರೀ ಸಾಹೇಬರ" ಎಂದು ಅಜ್ಜ ಹೇಳಿದ್ದು ಏಕೆ ?<br>***ಉತ್ತರ :***<br>ನಮ್ಮ ರಾಜ್ಯದಲ್ಲಿ ರೇಶನ್ ಪದ್ಧತಿ ಜಾರಿಯಲ್ಲಿದ್ದುದರಿಂದ ಒಂದು ಜಿಲ್ಲೆಯಿಂದ ಮತ್ತೊಂದು ಜಿಲ್ಲೆಗೆ ಅಕ್ಕಿ, ಸಕ್ಕರೆಯನ್ನು ಸರ್ಕಾರದ ಪರವಾನಿಗೆ ಇಲ್ಲದೆ ಒಯ್ಯುವಂತಿರಲಿಲ್ಲ. ಈ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಮಯದಲ್ಲಿ ಅಜ್ಜ ಧಾರವಾಡದಿಂದ ವಿಜಾಪುರಕ್ಕೆ ತಮ್ಮ ಸಂಬಂಧಿಕರೊಬ್ಬರಿಗೆ ಹಾಸಿಗೆಯಲ್ಲಿ ಸುತ್ತಿಕೊಂಡು ಐದು ಕಿಲೋ ಅಕ್ಕಿಯನ್ನು ಕೊಂಡು ರೈಲಿನಲ್ಲಿ ಹೋಗುತ್ತಿದ್ದರು. ರೈಲು ನಿಲ್ದಾಣದಲ್ಲಿ ಪೊಲೀಸ್ ಒಬ್ಬರು "ನಡೀರಿ ನಿಮ್ಮನ್ನು ಸಾಹೇಬ್ರು ಕರೀತಿದಾರೆ" ಎಂದು ಜೀಪಿನಲ್ಲಿ ಕರೆದುಕೊಂಡು ಹೋದಾಗ ಅಜ್ಜ ಅಪರಾಧಿ ಭಾವದಿಂದ ಕೈಮುಗಿದು ಈ ರೀತಿ ಸಾಹೇಬರಿಗೆ ಹೇಳಿದರು. | |
| 19. | "ಎಲ್ಲಿ ಹೋಗ್ಯಾವೊ ಗೆಳೆಯ ಆ ಕಾಲ" ಎಂಬ ಮಾತು ಲೇಖಕರಿಗೆ ನೆನಪಾಗಲು ಕಾರಣವೇನು ?<br><br>***ಉತ್ತರ :***<br><br>ಒಂದೆಡೆಗೆ ಕೃತಜ್ಞನಾದ ವಿದ್ಯಾರ್ಥಿ, ಇನ್ನೊಂದೆಡೆಗೆ ಕೃತಾರ್ಥನಾದ ಗುರು ಇಬ್ಬರೂ ಅಳುತ್ತ ಒಬ್ಬರನ್ನೊಬ್ಬರು ಅಪ್ಪಿಕೊಂಡ ರೀತಿ ಸಾರ್ಥಕ ಶಿಕ್ಷಕತ್ವದ ಹೆಗ್ಗುರುತು ಇದು. ಪ್ರಾಮಾಣಿಕ ಶಿಕ್ಷಕನಿಗೆ ದೊರೆತ ನೊಬೆಲ್ ಪ್ರಶಸ್ತಿ. ಇದನ್ನು ಕಂಡ ಲೇಖಕರಿಗೆ ಬೇಂದ್ರೆಯವರ "ಎಲ್ಲಿ ಹೋಗ್ಯಾವೊ ಗೆಳೆಯ ಆ ಕಾಲ" ಎಂಬ ನೆನಪಾಯಿತು. | |
| 20. | ರಾಮನ್‌ರು ಯಾರೊಬ್ಬರ ಶಿಫಾರಸ್ಸನ್ನು ನಂಬಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ ಏಕೆ ?<br><br>***ಉತ್ತರ :***<br><br>ರಾಮನ್‌ರವರು ತಮ್ಮ ಬಳಿ ಶಿಷ್ಯವೃತ್ತಿ ಕೈಗೊಳ್ಳಲು ಬರುವ ವಿದ್ಯಾರ್ಥಿಗಳನ್ನು ಕಠಿಣ ಪರೀಕ್ಷೆಗೆ ಒಳಪಡಿಸುತ್ತಿದ್ದರು. ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಗಳಿಸಿದ ಅಂಕಗಳು ಮುಖ್ಯವಾಗುತ್ತಿರಲಿಲ್ಲ. ವಿಷಯವನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆಯೇ, ಅವನ ಬುದ್ಧಿ ಹರಿತವಾಗಿದೆಯೇ, ಅವನಲ್ಲಿ ಉತ್ಸಾಹ ತುಂಬಿದೆಯೇ, ಕಷ್ಟಪಟ್ಟು ಕೆಲಸಮಾಡುವ ದೃಢ ನಿಶ್ಚಯ ಅವನಲ್ಲಿದೆಯೇ ಎಂದೆಲ್ಲ ಒರೆಹಚ್ಚಿ ನೋಡಿ, ಅವನನ್ನು ಪ್ರಶ್ನಿಸಿ, ಅವನ ತೂಕ ಎಷ್ಟೆಂದು ಗುರುತಿಸಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದರು. ಯಾರೊಬ್ಬರ ಶಿಫಾರಸ್ಸನ್ನು ನಂಬಿ ಶಿಷ್ಯರನ್ನು ಆಯ್ಕೆ ಮಾಡಿಕೊಳ್ಳುತ್ತಿರಲಿಲ್ಲ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 21. | ಮಗನು ಬೇಗನೆ ಏಳಬೇಕೆಂದು ತಾಯಿ ಬಯಸುವುದೇಕೆ ?<br>***ಉತ್ತರ :***<br>ಸೂರ್ಯದೇವನು ತನ್ನ ಬಂಗಾರದ ಕಿರಣಗಳಿಂದ ಬೆಳಗುತ್ತಾನೆ. ಹಕ್ಕಿಗಳು ಇಂಪಾಗಿ ಹಾಡುತ್ತವೆ, ಬೇಗ ಸ್ನಾನಮಾಡಿ ಪೂಜೆಗೆ ಹೂಗಳನ್ನು ತರಬೇಕು. ಶಾಲೆಗೆ ಹೊತ್ತಾಗಿ ಹೋದರೆ ಗುರುಗಳು ಏನಾದರೂ ಹೇಳುತ್ತಾರೆ. ಆದ್ದರಿಂದ ಮಗನು ಬೇಗನೆ ಏಳಬೇಕೆಂದು ತಾಯಿ ಬಯಸುತ್ತಾಳೆ. | |
| 22. | ಕವಯಿತ್ರಿಗೆ ತನ್ನ ಇರುವಿಕೆಯ ಅರಿವಾಗುವುದು ಯಾವಾಗ ?<br>***ಉತ್ತರ :***<br>ಲೇಖಕಿಗೆ ತನ್ನ ಇರುವಿಕೆಯ ಅರಿವಾಗದೆ ಹೋದಾಗ ಗಾಬರಿಯಾಗುತ್ತದೆ, ಮಹಾಮನೆಯ ಎಂಜಲೆಲೆ ಪಂಕ್ತಿಯನ್ನು ಸರಸರನೆ ದಾಟಿ ಮಹಾದ್ವಾರದಿಂದ (ಅಡುಗೆ ಮನೆಯ ಸೀಮಿತ ಪರಿಧಿಯಿಂದ) ಹೊರಬಂದು ವಿದ್ಯೆ, ಅರಿವು, ಪ್ರೋತ್ಸಾಹದಿಂದ ವಿಶಾಲ ಪ್ರಪಂಚದಲ್ಲಿ ತನ್ನ ಇರುವಿಕೆಯನ್ನು ದಾಖಲಿಸಿದಾಗ ಲೇಖಕಿಗೆ ತನ್ನ ಇರುವಿಕೆಯ ಅರಿವಾಗುತ್ತದೆ. | |
| 23. | ಬಾಹುಬಲಿಯು ಬೆಟ್ಟದ ಮೇಲೆ ಬಂದು ನಿಲ್ಲಲು ಕಾರಣವೇನು ?<br>***ಉತ್ತರ :***<br>ರಾಜ್ಯ ವಿಸ್ತರಣಾಕಾಂಕ್ಷಿಯಾದ ಭರತನನ್ನು ತಮ್ಮನಾದ ಬಾಹುಬಲಿಯು ಸೋಲಿಸುತ್ತಾನೆ. ಸೋತ ಅಣ್ಣನಿಗೆ ಗೆದ್ದರಾಜ್ಯವನ್ನು ಒಪ್ಪಿಸಿದ ತಮ್ಮನು ವೈರಾಗ್ಯಪರನಾಗಿ ಜನರ ನೋವುಗಳಿಗೆ ಪರಿಹಾರ ಹುಡುಕಲು ತಪಸ್ಸನ್ನಾಚರಿಸಲು ಬೆಟ್ಟದ ಮೇಲೆ ಬಂದು ನಿಲ್ಲುತ್ತಾನೆ. | |
| 24. | ಕವಿ ಸಿ.ಪಿ.ಕೆ.ಯವರು ಪ್ರತಿಯೊಬ್ಬನೂ ತನ್ನದಾದ ಕರ್ತವ್ಯವನ್ನು ಹೇಗೆ ಮಾಡಬೇಕೆನ್ನುತ್ತಾರೆ ?<br>***ಉತ್ತರ :***<br>ಜನರು ಸಂಪತ್ತು, ಹೆಸರು, ಕೀರ್ತಿ, ಆಡಂಬರ ಪ್ರದರ್ಶನಕ್ಕೆ ಮನಸೋಲುವುದು ಸಹಜ. ಆದರೆ ನಮ್ಮೆಲ್ಲರ ಬಾಳಿಗೆ ಆಧಾರವಾಗಿರುವ ಪ್ರಕೃತಿಯು ತನ್ನೆಲ್ಲಾ ಕಾರ್ಯವನ್ನು ಸದ್ದುಗದ್ದಲವಿಲ್ಲದೆ ನಡೆಸಿಕೊಂಡು ಹೋಗುತ್ತಲೇ ಇರುತ್ತದೆ. ತಟ್ಟೆಯಲ್ಲಿ ಕರ್ಪೂರ ಮೌನದಲ್ಲಿ ಕರಗುವಂತೆ, ದೀಪದೆದುರಿಗೆ ತಿಮಿರ ಸರಿಯುವಂತೆ, ಮಾನವನು ತನ್ನಪಾಲಿನ ಕರ್ತವ್ಯವನ್ನು ಶಾಂತಿ, ಸಹನೆ, ಪ್ರೀತಿಯಿಂದ ಮಾಡಬೇಕೆಂದು ಕವಿ ಸಿ.ಪಿ.ಕೆ.ಯವರು ಹೇಳಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 25. | ಪರಹಿತಕೆ ಬಳಲುವುದೆ ಜೀವನವು ಹೇಗೆ ?<br>***ಉತ್ತರ :***<br>ಮಾನವನಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ, ಪರರ ಹಿತಕ್ಕಾಗಿ ಕರ್ತವ್ಯಪರರಾಗಬೇಕು. ಸ್ವಾರ್ಥದ ಜೊತೆ ಜೊತೆಯಲ್ಲಿಯೇ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕು. ಸಮಾಜದಿಂದ ನೂರಾರನ್ನು ಪಡೆದು ಬೆಳೆದ ನಾವು ಅದೇ ಸಮಾಜಕ್ಕೆ ಸ್ವಲ್ಪವಾದರೂ ಮರಳಿಸುವುದು ನಮ್ಮ ಜೀವನ ಶೈಲಿಯಿಂದ ಸಾಧ್ಯವಾಗಬೇಕು ಎಂದು ಹೇಳಿದ್ದಾರೆ. | |
| 26. | ಅಪ್ಪಯ್ಯನಿಗೆ ಮಕ್ಕಳು ಹೇಗೆ ಹೆಸರು ತರುತ್ತಾರೆ ?<br>***ಉತ್ತರ :***<br>ಜನಪದರ ದೃಷ್ಟಿಯಲ್ಲಿ ಗಂಡು–ಹೆಣ್ಣು ಎರಡೂ ಸಮಾನ, ಇಬ್ಬರೂ ಕುಟುಂಬ ವ್ಯವಸ್ಥೆಯಲ್ಲಿ ಮುಖ್ಯರು. ಹೆಣ್ಣು ನೆರಮನೆಯ ಸಿರಿದೇವಿಯಾಗಿ ಅಪ್ಪಯ್ಯನಿಗೆ ಹೆಸರು ತಂದರೆ, ಗಂಡು ಮನೆಯ ತೊಲೆಗಂಬದಂತೆ ನಿಂತು ವಂಶವನ್ನು ಬೆಳಗುತ್ತಾನೆ. ಹೀಗೆ ಮಕ್ಕಳು ತಂದೆಗೆ ಹೆಸರು ತರುತ್ತಾರೆ. | |
| 27. | ಯುದ್ಧವನ್ನು ಮಾಡದೆಯೆ ಸುಖಪಡಬಹುದೆಂಬುದನ್ನು ಉತ್ತರನು ಹೇಗೆ ಸಮರ್ಥಿಸಿದನು?<br>***ಉತ್ತರ :***<br>ಯುದ್ಧಭೂಮಿಯಿಂದ ಓಡಿಹೋದ ಪಾಪವನ್ನು ಬ್ರಾಹ್ಮಣರು ಕಳೆಯುತ್ತಾರೆ. ಸುರಸತಿ, ಅಪ್ಸರೆಯರ ಸ್ಥಾನವನ್ನು ನಮ್ಮ ಅರಮನೆಯ ನಾರಿಯರು ತುಂಬುತ್ತಾರೆ. ನಮಗೆ ರಾಜಪದವಿಯೇ ಇಂದ್ರಪದವಿಯಂತೆ. ಆದಕ್ಕಾಗಿ ಯುದ್ಧ ಮಾಡಿ ಸತ್ತು ಸ್ವರ್ಗಕ್ಕೆ ಹೋಗುವುದಕ್ಕಿಂತ, ಯುದ್ಧ ಮಾಡದೇ ಸುಖಪಡೆಯಬಹುದು ಎಂದು ಉತ್ತರನು ಸಮರ್ಥಿಸಿಕೊಂಡನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 28. | ಲೇಖಕರು ಅನ್ನಪೂರ್ಣೆಗೆ ಹೇಳಿದ ಮಾತು ಕೇವಲ ಕೌನ್ಸಿಲಿಂಗ್ ಆಗಿತ್ತು. ಹೇಗೆ ?<br>***ಉತ್ತರ :***<br>ಅನ್ನಪೂರ್ಣೆಯ ಗುಣ, ಸ್ವಭಾವಗಳನ್ನು ತನ್ನ ಅಕ್ಕನಿಂದ ಸೂಕ್ಷ್ಮವಾಗಿ ತಿಳಿದಿದ್ದ ಲೇಖಕರು “ನೋಡಮ್ಮ ನನಗೆ ನಿಮ್ಮ ಪರಿಚಯವಿಲ್ಲ, ಜೋಯಿಸರ ಈ ಕುರ್ಚಿಯ ಮೇಲೆ ಕುಳಿತಾಗ ಮಾತ್ರ ಕೇಳಿಸುವ ಈ ಕವಡೆಗಳು ಹೇಳಿದ ಸತ್ಯವನ್ನು ನಾನು ನಿಮಗೆ ಹೇಳಿದ್ದೇನೆ. ನಿಮಗೆ ಮತ್ತು ನಿಮ್ಮ ಮಗುವಿಗೆ ಸುಖ–ಸಂತೋಷ ಬೇಕಾದರೆ ಆ ಖಜಾನೆಯ ಕೀಲಿಕೈಯೇ ನಿಮ್ಮ ಮನೆಯಲ್ಲಿ ದುಃಖಿಯಾಗಿ ಕುಳಿತಿರುವ ಆ ಹೆಣ್ಣುಮಗು. ಅವಳನ್ನು ಸಂತೋಷವಾಗಿಟ್ಟು, ಅವಳಿಗೆ ಸಲ್ಲಬೇಕಾದುದನ್ನು ಕೊಟ್ಟರೆ ನೀವು ನಂಬಿದ ದೇವರು ನಿಮಗೆ ಸಲ್ಲಬೇಕಾದುದನ್ನು ಕೊಡುತ್ತಾನೆ.” ಎಂಬ ಲೇಖಕರ ಮಾತುಗಳು ಕೇವಲ ಕೌನ್ಸಿಲಿಂಗ್ ಆಗಿತ್ತು. | |
| 29. | ಸಾವಿತ್ರಿ ತೀರಾ ಮುಗ್ಧೆ ಹೇಗೆ ?<br>***ಉತ್ತರ :***<br>ಸಾವಿತ್ರಿ ಹೊಚ್ಚಹೊಸ ಮದುಮಗಳು. ಅಡುಗೆ ಮನೆಯಲ್ಲಿ ಅಡುಗೆ ಮಾಡುವ ಅನುಭವವಿಲ್ಲ, ತೊಗರಿ–ಕಡಲೆಯ ಮಧ್ಯೆ ವ್ಯತ್ಯಾಸಗೊತ್ತಿಲ್ಲ. ಒಳಿತು–ಕೆಟ್ಟದರ ಅನುಭವವೂ ಇಲ್ಲ. ಆದ್ದರಿಂದ ಸಾವಿತ್ರಿ ತೀರಾ ಮುಗ್ಧೆ ಎಂದು ಹೇಳಬಹುದು. | |
| 30. | **ಪದ್ಯಭಾಗ ಪೂರ್ಣಗೊಳಿಸಿ ಬರೆಯುವುದು :**<br>(ತಪ್ಪಿಲ್ಲದೆ ಬರೆದ ಪೂರ್ಣಸಾಲುಗಳಿಗೆ ಒಟ್ಟಾರೆ ಮೂರು ಅಂಕಗಳು)<br>ಕೊರಡ ಕೊನರಿಸಿ ....................................................<br>.......................................................................<br>.......................................................................<br>................................................ ಕಲರವಕೆ ಮತ್ತೇರಿದೆ.<br>**ಅಥವಾ**<br>ಯುಗದ ಹಿಂದಿನ ....................................................<br>.......................................................................<br>.......................................................................<br>................................................ ತುಂಬ ಸವಿಚೈತ್ರವು. | $1 \times 3 = 3$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ಕೊರಡ ಕೊನರಿಸಿ ತುದಿಗೆ ಮುಗುಳ ನಗೆ ಮುತ್ತಿಟ್ಟು<br>ಬರಡು ಜೀವಕೆ ಹೊಸತು ಚೈತನ್ಯವು<br>ಕುಕಿಲ ಕೋಗಿಲೆ ಕಂಠ ಮುಕ್ತ ತಾರಕಕೇರಿ<br>ಚಿಲಿಪಿಲಿಯ ಕಲರವಕೆ ಮತ್ತೇರಿದೆ. | |
| | **ಅಥವಾ** | |
| | ಯುಗದ ಹಿಂದಿನ ಕೊಳೆಯ ತಿಕ್ಕಿ ಮೈ ತೊಳೆದಂತೆ<br>ನಗುವ ನಲಿವಿನ ಮುಖವೆ ಎಲ್ಲೆಲ್ಲಿಯೂ<br>ಬೆಲ್ಲ ಬೇವಿಗೆ ಸೇರಿ ಕಹಿ ಕಳೆದು ಸಿಹಿ ಹೆಚ್ಚಿ<br>ಎಲ್ಲರೆದೆಗಳ ತುಂಬ ಸವಿಚೈತ್ರವು. | |
| | **ಕವಿಗಳ / ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯುವುದು :** | 2 × 3 = 6 |
| | ಜನ್ಮಸ್ಥಳ, ಕಾಲ | 1 ಅಂಕ |
| | ಕೃತಿಗಳು, ಪ್ರಶಸ್ತಿ | 1 ಅಂಕ |
| | ವಾಕ್ಯರೂಪದಲ್ಲಿ ಬರೆಯುವುದು, ಭಾಷಾಶೈಲಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 31. | *ಕುವೆಂಪು :* | |
| | ***ಉತ್ತರ :*** | |
| | ಕುವೆಂಪು – ಪ್ರಕೃತಿ ಕವಿ, ಕನ್ನಡದ ವರ್ಡ್ಸ್‌ವರ್ತ್ ಎಂದೇ ಖ್ಯಾತರಾಗಿದ್ದ ಕುಪ್ಪಳಿ ವೆಂಕಟಪ್ಪ ಪುಟ್ಟಪ್ಪ ಅವರು ೧೯೦೪ ರಲ್ಲಿ ಶಿವಮೊಗ್ಗ ಜಿಲ್ಲೆಯ ಕುಪ್ಪಳ್ಳಿಯಲ್ಲಿ ಜನಿಸಿದರು. | |
| | ಇವರು ಚಂದ್ರಮಂಚಕ ಬಾ ಚಕೋರಿ, ನವಿಲು, ಪಕ್ಷಿಕಾಶಿ (ಕವನಸಂಕಲನ) ಬೆರಳ್‌ಗೆ ಕೊರಳ್, ಶೂದ್ರತಪಸ್ವಿ, ಜಲಗಾರ (ನಾಟಕ) ರಸೋವೈಸಃ, ವಿಭೂತಿ ಪೂಜೆ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ದ್ರೌಪದಿಯ ಸಿರಿಮುಡಿ (ವಿಮರ್ಶೆ) ನನ್ನ ದೇವರು ಮತ್ತು ಇತರ ಕತೆಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು (ಕಾದಂಬರಿ) ಮಹಾಕಾವ್ಯವಾದ ಶ್ರೀ ರಾಮಾಯಣ ದರ್ಶನಂ – ಇವೇ ಮೊದಲಾದ ೮೦ ಕೃತಿಗಳನ್ನು ರಚಿಸಿದ್ದಾರೆ.<br><br>ಇವರಿಗೆ ಪದ್ಮಭೂಷಣ (೧೯೫೮), ರಾಷ್ಟ್ರಕವಿ (೧೯೬೪), ಜ್ಞಾನಪೀಠ ಪ್ರಶಸ್ತಿ (೧೯೬೮), ಪಂಪ ಹಾಗೂ ಕರ್ನಾಟಕ ರತ್ನ ಪ್ರಶಸ್ತಿಗಳು ಬಂದಿವೆ. | |
| 32. | *ಗದುಗಿನ ನಾರಣಪ್ಪ (ಕುಮಾರವ್ಯಾಸ) :*<br><br>***ಉತ್ತರ :***<br><br>ನಾರಣಪ್ಪ ಅವರು ಗದುಗಿನ ಕೋಳಿವಾಡದಲ್ಲಿ ಸುಮಾರು ೧೪೩೦ ರಲ್ಲಿ ಜನಿಸಿದ್ದಾರೆ.<br><br>ಇವರ 'ಕರ್ಣಾಟ ಭಾರತ ಕಥಾಮಂಜರಿ' ಇದಕ್ಕೆ 'ಗದುಗಿನ ಭಾರತ'ವೆಂಬ ಹೆಸರೂ ಇದೆ, 'ಐರಾವತ' ಎಂಬ ಎರಡು ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ 'ಕುಮಾರವ್ಯಾಸ' ಎಂಬ ಅಭಿದಾನವಿದ್ದು 'ರೂಪಕ ಸಾಮ್ರಾಜ್ಯ ಚಕ್ರವರ್ತಿ' ಎಂಬ ಬಿರುದು ಪಡೆದಿದ್ದಾರೆ. | |
| | **ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯ ಬರೆಯುವುದು :** | 4 × 3 = 12 |
| | ಕೃತಿ, ಕರ್ತೃ, ಪದ್ಯದ ಹೆಸರು | 1 ಅಂಕ |
| | ಯಾರು–ಯಾರಿಗೆ, ಸಂದರ್ಭ ವಿವರಣೆ | 1 ಅಂಕ |
| | ಭಾಷಾಶೈಲಿ, ಪದಬಂಧಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 33. | ಅವರ ಜನಪ್ರಿಯತೆಗೆ ಬೇರೆ ಸಾಕ್ಷಿ ಬೇಡ.<br>***ಉತ್ತರ :***<br>ಈ ವಾಕ್ಯವನ್ನು ಸಂಪಾದಿತ ಕೃತಿಯಿಂದ ಆಯ್ದ 'ಗಾನಯೋಗಿ ಪಂಡಿತ ಪುಟ್ಟರಾಜ ಗವಾಯಿ' ಪಾಠದಿಂದ ಆಯ್ದುಕೊಳ್ಳಲಾಗಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ನಾಡಿನ ಜನತೆ ಪುಟ್ಟರಾಜ ಗವಾಯಿ ಅವರ ಮೇಲಿಟ್ಟಿದ್ದ ಪ್ರೀತಿ, ಗೌರವಗಳನ್ನು ಕುರಿತು ಮೇಲಿನ ಮಾತನ್ನು ಹೇಳಿದ್ದಾರೆ. | |
| | ಪುಟ್ಟರಾಜ ಗವಾಯಿ ಅವರ ಸಾಧನೆಗಳಿಗೆ ರಾಜ್ಯ, ಅಂತರ್‌ರಾಜ್ಯ ಹಾಗೂ ರಾಷ್ಟ್ರ ಮಟ್ಟದ ಹಲವಾರು ಪ್ರಶಸ್ತಿ, ಪುರಸ್ಕಾರಗಳು ಲಭಿಸಿವೆ. ಇವೆಲ್ಲಕ್ಕೂ ಮಿಗಿಲಾದ ಇವರ ಶೈಕ್ಷಣಿಕ, ಸಾಹಿತ್ಯಿಕ, ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರತಿಯಾಗಿ ೧೫೩೫ ಬಾರಿ ತುಲಾಭಾರ ನಡೆದಿದಯೆಂದರೆ ಅವರ ಜನಪ್ರಿಯತೆಗೆ ಬೇರೆ ಸಾಕ್ಷಿಬೇಡ ಎಂದು ಸಂಪಾದಕರು ಹೇಳಿದ್ದಾರೆ. | |
| 34. | "ನಿನ್ನಲ್ಲಿ ಹತ್ತು ಕಿಲೋವ್ಯಾಟ್ ಶಕ್ತಿಯ ಬುದ್ಧಿ ಇದೆ"<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು ಬಿ.ಪಿ. ರಾಧಕೃಷ್ಣ ಅವರ 'ಸಿ.ವಿ. ರಾಮನ್' ಕೃತಿಯಿಂದ ಆಯ್ದ 'ಶಿಷ್ಯವತ್ಸಲ ರಾಮನ್' ಪಾಠದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ರಾಮನ್ ಅವರು ತಮ್ಮ ಶಿಷ್ಯನಿಗೆ ಹೇಳಿದ್ದಾರೆ.<br>ಶಿಷ್ಯ ಪಿಷಾರೊದಿಯ ಗೋಳುಮುಖ ಕಂಡು ರಾಮನ್ನರು 'ಏನು ಸಮಾಚಾರ' ಎಂದು ಕೇಳಿದರು. ಅದಕ್ಕೆ ಪಿಷಾರೋದಿ "ಸಾರ್, ಕೇಂಬ್ರಿಡ್ಜಿನಲ್ಲಿ ವಿಜ್ಞಾನಿಯೊಬ್ಬ ನಾನು ಮಾಡುತ್ತಿರುವ ಸಂಶೋಧನೆಯಲ್ಲಿಯೇ ಅವನು ತೊಡಗಿದ್ದಾನೆ. ಅವನ ಬಳಿ ಐದು ಕಿಲೋವ್ಯಾಟ್ ಶಕ್ತಿಯುಳ್ಳ ಎಕ್ಸರೇ ಟ್ಯೂಬ್ ಇದೆ. ನನ್ನ ಹತ್ತಿರವಿರುವುದು ಒಂದು ಕಿಲೋವ್ಯಾಟ್ ಟ್ಯೂಬ್ ಮಾತ್ರ. ಅವನು ಮುಂದುವರೆಯುತ್ತಾನೆ, ನಾನು ಹಿಂದುಳಿದಿದ್ದೇನೆ" ಎಂದನು. ಅದಕ್ಕೆ ರಾಮನ್‌ರು "ಇಷ್ಟೇನೆ! ಇದಕ್ಕೆ ಪರಿಹಾರ, ನಿನ್ನಲ್ಲಿ ಹತ್ತು ಕಿಲೋವ್ಯಾಟ್ ಶಕ್ತಿಯ ಬುದ್ಧಿ ಇದೆ. ಅದನ್ನು ಉಪಯೋಗಿಸಿ ಸಂಶೋಧನೆಯನ್ನು ಮುಂದುವರೆಸು" ಎಂದರು. ಇಲಿ ರಾಮನ್ನರು ತಮ್ಮ ಶಿಷ್ಯರನ್ನು ಹುರಿದುಂಬಿಸುತ್ತಿದ್ದ ರೀತಿಯನ್ನು ಕಾಣಬಹುದು. | |
| 35. | "ನೀನು ಸೋತು ಗೆದ್ದೆ ಅಣ್ಣ, ನಾನು ಗೆದ್ದು ಸೋತೆನು"<br>***ಉತ್ತರ :***<br>ಈ ಮೇಲಿನ ವಾಕ್ಯವನ್ನು ಸು.ರಂ. ಎಕ್ಕುಂಡಿಯವರ 'ಕಥನ ಕವನಗಳು' ಎಂಬ ಕವನಸಂಗ್ರಹದಿಂದ ಆಯ್ದ 'ನನ್ನ ಹಾಗೆಯೆ' ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಬಾಹುಬಲಿಯು ಭರತನಿಗೆ ಹೇಳುತ್ತಾನೆ.<br>ಒಮ್ಮೆ ಭರತ ಚಕ್ರವರ್ತಿಯು ತಮ್ಮನಾದ ಬಾಹುಬಲಿಯ ಜೊತೆಗೆ ಹಮ್ಮಿನಿಂದ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಬಂದು ಸೆಣಸಿ ತಮ್ಮನಲ್ಲಿ ಸೋಲುತ್ತಾನೆ. ಗೆದ್ದ ರಾಜ್ಯವನ್ನು ಅಣ್ಣನಿಗೆ ಒಪ್ಪಿಸಿ ವೈರಾಗ್ಯಪರನಾಗಿ "ನೀನು ಸೋತು ಗೆದ್ದೆ ಅಣ್ಣ ನಾನು ಗೆದ್ದು ಸೋತೆನು" ಎಂದು ಹೇಳಿ ಸರ್ವವನ್ನು ತ್ಯಜಿಸಿ ತಪಸ್ಸಿಗೆ ಹೊರಟನು. ಇಲ್ಲಿ ಬಾಹುಬಲಿಯ ತ್ಯಾಗ ಭಾವನೆಯನ್ನು ಕಾಣಬಹುದು. | |
| 36. | ಬತ್ತುವ ಜಲವ ಒಣಗುವ ಮರನ ಮೆಚ್ಚಿದವರು.<br>***ಉತ್ತರ :***<br>ಈ ವಾಕ್ಯವನ್ನು 'ಬಸವಣ್ಣ'ನವರು ಬರೆದಿರುವ 'ವಚನಗಳಿಂದ' ಆಯ್ದುಕೊಳ್ಳಲಾಗಿದೆ.<br>ಈ ಮಾತನ್ನು ಜನರು ಆಚರಿಸುತ್ತಿರುವ ಮೂಢನಂಬಿಕೆಗಳನ್ನು ಕುರಿತು ಹೇಳಿದ್ದಾರೆ.<br>ಜನರು ನೀರನ್ನು ಕಂಡರೆ ಮುಳುಗುತ್ತಾರೆ. ಮರವನ್ನು ಕಂಡರೆ ಸುತ್ತುತ್ತಾರೆ. ಬತ್ತುವ ಜಲವನ್ನು, ಒಣಗುವ ಮರವನ್ನು ಮೆಚ್ಚಿದವರು ಕೂಡಲಸಂಗಮದೇವನನ್ನು ತಿಳಿಯಲು ಸಾಧ್ಯವಿಲ್ಲ. ಆದ್ದರಿಂದ ಅರ್ಥವಿಲ್ಲದ ಆಚರಣೆಗಳನ್ನು ಬಿಟ್ಟು ಪ್ರಾಮಾಣಿಕವಾಗಿ ನಡೆಯುವುದನ್ನು ಕಲಿಯಬೇಕು. ಮಾತಿಗೂ, ಆಚರಣೆಗೂ ಹೊಂದಿಕೆಯಾಗುವಂತೆ ಜೀವನ ನಡೆಸಬೇಕೆಂದು ಬಸವಣ್ಣನವರು ಹೇಳಿದ್ದಾರೆ. | |
| | **ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರಿಸುವುದು :** | 2 × 4 = 8 |
| | ವಿಷಯಾಂಶಕ್ಕೆ | 3 ಅಂಕಗಳು |
| | ಭಾಷಾಶೈಲಿ, ಪದಬಳಕೆ | 1 ಅಂಕ |
| | ಒಟ್ಟು | 4 ಅಂಕಗಳು |
| 37. | ಪಶ್ಚಿಮ ಘಟ್ಟಗಳ ಪತನ ಹೇಗಾಗುತ್ತಿದೆ ? ವಿವರಿಸಿ.<br>**ಅಥವಾ**<br>ಸಹ್ಯಾದ್ರಿ ಸಹನೆ ಕಳೆದುಕೊಳ್ಳಲು ಕಾರಣವೇನು ? ಅದರ ಪರಿಣಾಮವೇನು ? ವಿವರಿಸಿ.<br>***ಉತ್ತರ :***<br>ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದುದು ಸ್ವಾತಂತ್ರ್ಯ ಬಂದ ಮೇಲೆ. ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದರು. ಇನ್ನೊಂದು ಕಡೆ ಅರಣ್ಯ ಹುಟ್ಟುವಳಿಗಳಾದ ಮೆಣಸು, ದಾಲ್ಚಿನಿ, ಜೇನು, ಧೂಪ, ದಂತ, ರಾಳ, ಭಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾದ್ದರಿಂದ ಹಣದಾಸೆಗ ಕಾಡು ದೋಚುವವರ ಸಂಖ್ಯೆ ಹೆಚ್ಚಾದದ್ದು, ಇವೆಲ್ಲಕ್ಕಿಂತ ಹೆಚ್ಚಾಗಿ, ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ, ಖನಿಜ, | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ವಿದ್ಯುತ್ತಿಗೆಂದು ಸರಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು ಕಾಪಾಡಬೇಕಿದ್ದ ಮಾಲೀಕನೇ ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು ತಾನು ದೋಚುವುದಷ್ಟೇ ಅಲ್ಲದೆ, ದೋಚಲು ಸಿದ್ಧರಾದ ಖಾಸಗಿ ಉದ್ದಿಮೆದಾರರನ್ನಲ್ಲಿಗೆ ಕರೆದು ಕೊಡಲಿ, ಗುದ್ದಲಿ, ಸಿಡಿಮದ್ದುಗಳನ್ನು ನೀಡಿತು. | |
| | ಕೊಡಲಿ, ಗುದ್ದಲಿ, ಸಿಡಿಮದ್ದುಗಳಿಂದ ಪಶ್ಚಿಮ ಘಟ್ಟಗಳು ತತ್ತರಿಸುತ್ತಿವೆ. ನೋಡ ನೋಡುತ್ತ ನಿರ್ನಾಮವಾಗುತ್ತಿವೆ. ಹೀಗೆ ಪಶ್ಚಿಮ ಘಟ್ಟಗಳ ಪತನವಾಗುತ್ತಿದೆ. | |
| | ***ಅಥವಾ*** | |
| | ಪಶ್ಚಿಮ ಘಟ್ಟಗಳನ್ನು ನಿರಂತರವಾಗಿ ಬಳಸುತ್ತಿರುವುದರಿಂದ ಸಹ್ಯಾದ್ರಿ ಸಹನೆ ಕಳೆದುಕೊಳ್ಳುತ್ತಿದೆ. ಸಹಸ್ರಾರು ವರುಷಗಳಿಂದ ವಿವಿಧ ಬಗೆಯ ಜೀವಕೋಟಿಗೆ ಆಶ್ರಯ ನೀಡಿದ ಈ ಸಹ್ಯ ಪರ್ವತಗಳು ಈಗ ಅಸಹ್ಯ ಪರ್ವತಗಳಾಗುತ್ತಿವೆ. | |
| | ಅರಣ್ಯಗಳನ್ನು ಎಡೆಬಿಡದೆ ಬಳಸುತ್ತಿರುವುದರಿಂದ ಭೂಮಿಯ ಮೇಲಿನ ಮಣಿನ ಕವಚ ತೊಳೆದು ಹೋಗುತ್ತಿದೆ. ಕೆರೆ, ಸರೋವರ, ನದಿ, ಒಡ್ಡು, ಅಣೆಕಟ್ಟುಗಳಲ್ಲಿ ಶೀಘ್ರಗತಿಯಲ್ಲಿ ಹೂಳು ತುಂಬಿ, ನೀರಿನ ನಿಕ್ಷೇಪ ಕಡಿಮೆಯಾಗುತ್ತಿದೆ. | |
| | ಮಳೆಯ ರಭಸವನ್ನು ತಡೆದು ನೀರನ್ನು ನಿಧಾನವಾಗಿ ಭೂಮಿಯೊಳಕ್ಕೆ ಇಂಗಿಸಬೇಕಿದ್ದ ಮರಗಳು ಕಡಿಮೆಯಾದುದರಿಂದ ಪ್ರವಾಹದ ಹಾವಳಿ ಹೆಚ್ಚುತ್ತಿದೆ. ಭೂಕುಸಿತ ಅತಿಯಾಗುತ್ತಿದೆ. ಅಂತರ್ಜಲ ಕಡಿಮೆಯಾಗಿ ಬೇಸಿಗೆಯಲ್ಲಿ ನದಿಗಳು ಬತ್ತತೊಡಗಿವೆ. ವನ್ಯಜೀವಿಗಳಿಗೆ ಆಶ್ರಯ ತಪ್ಪಿಹೋಗಿ, ಹೊಲಗದ್ದೆಗಳಿಗೆ ದಾಳಿ ಆರಂಭಿಸಿವೆ. ಎಲ್ಲೊ ಎಲೆಮರೆಯಲ್ಲಿ ಮುದುರಿಕೊಂಡಿದ್ದ ಕ್ಯಾಸನೂರು ರೋಗಾಣುಗಳು ಕಾಡು ಬಿಟ್ಟು ನಾಡಿಗೆ ಹಬ್ಬುತ್ತಿವೆ. ಏಕಜಾತಿಯ ಸಸ್ಯಗಳಿಂದಾಗಿ, ಕೀಟಗಳ ಹಾವಳಿ, ರೋಗಗಳ ಹಾವಳಿ ಹೆಚ್ಚುತ್ತಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಪ್ರಕೃತಿಯ ಪ್ರತಿಭಟನೆಯನ್ನು ಜನರು ನಿರ್ಲಕ್ಷಿಸಿದಾಗ ಘಾಸಿಗೊಂಡ ಪಶ್ಚಿಮ ಘಟ್ಟಗಳ ಕೋಪತಾಪದ ಪ್ರಭಾವ ಗುಡ್ಡಗಾಡು ಮತ್ತು ಬಯಲಿನ ಪರಿಮಿತಿಯನ್ನು ಮೀರಿ ಇಡೀ ದಕ್ಷಿಣ ಭಾರತದ ಹವಾಮಾನದ ಏರುಪೇರುಗಳಿಗೆ, ಅತಿವೃಷ್ಟಿ, ಅನಾವೃಷ್ಟಿ ಚಂಡಮಾರುತಗಳಿಗೆ ಕಾರಣವೆಂದು ಊಹಿಸುವ ಮಟ್ಟಕ್ಕೆ ಪರಿಣಾಮವನ್ನು ಉಂಟುಮಾಡಿದೆ. | |
| 38. | 'ಗುರಿ' ಪದ್ಯದ ಸಾರಾಂಶವನ್ನು ಕವಿಯ ಆಶಯದೊಂದಿಗೆ ಬರೆಯಿರಿ.<br>***ಅಥವಾ***<br>ಜೀವನ ಸಾರ್ಥಕ್ಯಕ್ಕಾಗಿ ಕೈಗೊಳ್ಳಬೇಕಾದ ಕಾರ್ಯಗಳನ್ನು 'ಗುರಿ' ಪದ್ಯವನ್ನಾಧರಿಸಿ ಬರೆಯಿರಿ.<br>***ಉತ್ತರ :***<br>ಕವಿ ಎಂ. ಗೋಪಾಲಕೃಷ್ಣ ಅಡಿಗರು ಮಾನವ ಜೀವನ ಶ್ರೇಷ್ಠವಾದುದು. ಆದ್ದರಿಂದ ಪ್ರತಿಯೊಬ್ಬ ಮಾನವರ ಬದುಕಿಗೆ ಒಂದು ಗುರಿ ಇರಬೇಕು. ಇಲ್ಲದಿದ್ದರೆ ಜೀವನಕ್ಕೆ ಒಂದು ನಿಶ್ಚಿತತೆ ಇರುವುದಿಲ್ಲ. ಹಾಗೆಯೇ ಅಪಾರವಾದ ಕಡಲಿನಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತಾಗುತ್ತದೆ. ಬಾಲ್ಯದಲ್ಲಿ ನಿರ್ದಿಷ್ಟ ಗುರಿಯನ್ನು ನಿಶ್ಚಯಿಸಲು ಆಗುವುದಿಲ್ಲವಾದರೂ ಪ್ರೌಢಶಾಲೆಯ ಓದು ಮುಗಿವ ಹೊತ್ತಿಗೆ ನಮ್ಮ ಗುರಿ ಏನೆಂಬುದು ಖಚಿತ ರೂಪವನ್ನು ತಾಳಬೇಕು. ಸ್ವೀಕರಿಸಿದ 'ಗುರಿ'ಯನ್ನು ನಿರ್ವಹಿಸಲು ಕಷ್ಟವಾದರೂ ವೈಯಕ್ತಿಕ, ಪರಿವಾರದ ಹಾಗೂ ದೇಶದ ಶ್ರೇಯಸ್ಸಿಗಾಗಿ ಎದುರಾಗುವ ಅಡ್ಡಿ ಆತಂಕಗಳನ್ನು ನಿವಾರಿಸಿಕೊಂಡು ಮುಂದೆ ಸಾಗಬೇಕು, ಕೆಸರಿನಲ್ಲಿರುವ ಕಮಲ ರವಿಕಿರಣಗಳ ಸಿರಿಗೆ ಮೆರೆದಾಡುವಂತೆ ಮನುಜತೆಯ ಸಾರ್ಥಕತೆಗೆ ಒಂದು 'ಗುರಿ'ಯನ್ನು ಹೊಂದಬೇಕು. ಗಾಳಿ ಬಂದಾಗ ತೂರಿಕೊಳ್ಳುವುದನ್ನು ಬಿಟ್ಟು, ದಾಳಿಬಂದಾಗ ಶರಣೆನ್ನುವುದನ್ನು ಬಿಟ್ಟು ಹಿಡಿದ ಒಳ್ಳೆಯ ದಾರಿಯಲ್ಲಿ ಕೊನೆಯವರೆಗೆ ಪೌರುಷದಿಂದ ಬಾಳಬೇಕು. ಒಂದು ಬಾಣಕ್ಕೆ ಒಂದು ಗುರಿ ಇರುವಂತೆ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ, ಜೀವನಕ್ಕೂ ಒಂದೇ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಗುರಿ ಇರಬೇಕು. ಮಾನವನಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತ ಪರರ ಹಿತಕ್ಕಾಗಿ ಕರ್ತವ್ಯ ಪರರಾಗಬೇಕು. ಸ್ವಾರ್ಥದ ಜೊತೆಯಲ್ಲಿ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕೆಂಬುದು ಕವಿಯ ಆಶಯವಾಗಿದೆ. | |
| | ***ಅಥವಾ*** | |
| | ಮಾನವ ಜೀವನ ಸಾರ್ಥಕ್ಯಕ್ಕಾಗಿ ಪ್ರತಿಯೊಬ್ಬರೂ ಹೋರಾಡಬೇಕು. ಆಳಿಯಾಸೆಗಳ ಸುಳಿಗೆ ಸಿಕ್ಕಿ ತೊಳಲಬಾರದು. ಮಾನವನ ಬದುಕಿಗೆ ಒಂದು ಗುರಿ ಇಲ್ಲದಿದ್ದರೆ ಅಪಾರವಾದ ಕಡಲಿನಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತಾಗುತ್ತದೆ. ಕೆಸರಿನಲ್ಲಿ ಅರಳುವ ಕಮಲ ರವಿಕಿರಣಕ್ಕೆ ವಿಜೃಂಭಿಸುವಂತೆ ತಾನು ಹಿಡಿದ ಗುರಿಯನ್ನು ಸರಿಯಾದ ದಾರಿಯಲ್ಲಿ ಸಾಧಿಸಿದಾಗ ಜೀವನ ಸಾರ್ಥಕವಾಗುತ್ತದೆ. ಸ್ವೀಕರಿಸಿದ ಗುರಿಯನ್ನು ಸಾಧಿಸುವುದು ಕಷ್ಟವಾದರೂ ವೈಯಕ್ತಿಕ, ಪರಿವಾರದ ಮತ್ತು ದೇಶದ ಶ್ರೇಯಸ್ಸಿಗಾಗಿ ಮುಂದೆ ಸಾಗಬೇಕು. ಗಾಳಿ ಬಂದಾಗ ತೂರಿಕೊಳ್ಳುವುದನ್ನು ಬಿಟ್ಟು ದಾಳಿ ಬಂದಾಗ ಶರಣಾಗುವುದನ್ನು ಬಿಟ್ಟು ಪೌರುಷದಿಂದ ಬಾಳಬೇಕು. ಒಂದು ಬಾಣಕ್ಕೆ ಒಂದೇ ಗುರಿ, ಒಂದು ದೇಹಕ್ಕೆ ಒಂದೇ ಆತ್ಮ ಇರುವಂತೆ, ಜೀವನಕ್ಕೂ ಒಂದೇ ಗುರಿ ಇರಬೇಕು. ಮಾನವನಲ್ಲಿ ದೈವತ್ವವನ್ನು, ಭೂಮಿಯಲ್ಲಿ ಸ್ವರ್ಗವನ್ನು ಕಾಣುತ್ತಾ ಪರರ ಹಿತಕ್ಕಾಗಿ ಕರ್ತವ್ಯ ಪರರಾಗಬೇಕು. ಸ್ವಾರ್ಥದ ಜೊತೆಯಲ್ಲಿ ಪರಾರ್ಥದಲ್ಲೂ ಜೀವನ ಸಾರ್ಥಕ್ಯವನ್ನು ಕಾಣಬೇಕು. ಸಮಾಜದಿಂದ ನೂರಾರನ್ನು ಪಡೆದ ನಾವು ಅದೇ ಸಮಾಜಕ್ಕೆ ಸ್ವಲ್ಪವಾದರೂ ಮರಳಿಸಿ ನಮ್ಮ ಜೀವನ ಸಾರ್ಥಕ ಮಾಡಿಕೊಳ್ಳಬೇಕೆಂದು ಕವಿ ಹೇಳಿದ್ದಾರೆ. | |
| | **ವಿಭಾಗ – 'ಬಿ'** | |
| | **ಬಹು–ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) :** | $12 \times 1 = 12$ |
| 39. | 'ರಾಜರ್ಷಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ<br>(ಎ) ಸವರ್ಣದೀರ್ಘ ಸಂಧಿ (ಬಿ) ಗುಣ ಸಂಧಿ<br>(ಸಿ) ಯಣ್ ಸಂಧಿ (ಡಿ) ವೃದ್ಧಿ ಸಂಧಿ<br>***ಉತ್ತರ :*** (ಬಿ) ಗುಣ ಸಂಧಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 40. | ಏಕವಚನದಲ್ಲಿರುವ ನಾಮಪದವಿದು<br>(ಎ) ಕವಿಗಳು (ಬಿ) ಪಾಲಕರು<br>(ಸಿ) ಶಿಕ್ಷಕ (ಡಿ) ತಾಯಂದಿರು<br>***ಉತ್ತರ :*** (ಸಿ) ಶಿಕ್ಷಕ | |
| 41. | 'ಕೆಂದಾವರೆ' ಪದ ಈ ಸಮಾಸಕ್ಕೆ ಉದಾಹರಣೆಯಾಗಿದೆ<br>(ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ<br>(ಸಿ) ದ್ವಂದ್ವ ಸಮಾಸ (ಡಿ) ದ್ವಿಗು ಸಮಾಸ<br>***ಉತ್ತರ :*** (ಬಿ) ಕರ್ಮಧಾರಯ ಸಮಾಸ | |
| 42. | 'ಮನೆಯನ್ನು' ಪದದಲ್ಲಿರುವ ವಿಭಕ್ತಿ<br>(ಎ) ತೃತೀಯಾ (ಬಿ) ಚತುರ್ಥಿ<br>(ಸಿ) ಸಪ್ತಮಿ (ಡಿ) ದ್ವಿತೀಯಾ<br>***ಉತ್ತರ :*** (ಡಿ) ದ್ವಿತೀಯಾ | |
| 43. | 'ನೆರೆಹೊರೆ' ಪದ ಇದಕ್ಕೆ ಉದಾಹರಣೆ<br>(ಎ) ದ್ವಿರುಕ್ತಿ (ಬಿ) ಅನುಕರಣಾವ್ಯಯ<br>(ಸಿ) ಜೋಡುನುಡಿ (ಡಿ) ನಾಣ್ನುಡಿ<br>***ಉತ್ತರ :*** (ಸಿ) ಜೋಡುನುಡಿ | |
| 44. | ವರ್ತಮಾನ ಕಾಲದ 'ಕ್ರಿಯಾಪದ'ವಿದು<br>(ಎ) ಹೋಗುತ್ತಾಳೆ (ಬಿ) ಹೋಗುವಳು<br>(ಸಿ) ಹೋದಳು (ಡಿ) ಹೋಗಿಯಾಳು<br>***ಉತ್ತರ :*** (ಎ) ಹೋಗುತ್ತಾಳೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 45. | 'ಐದು' ಮಾತ್ರೆಗಳಿಂದ ಕೂಡಿರುವ ಪದ<br>(ಎ) ನಗುತ (ಬಿ) ರಥವನು<br>(ಸಿ) ಸಾಲಲ್ಲಿ (ಡಿ) ಐರಾವತ<br>***ಉತರ :*** (ಸಿ) ಸಾಲಲ್ಲಿ | |
| 46. | 'ಪತನ' – ಪದದ ಅರ್ಥ<br>(ಎ) ಅವನತಿ (ಬಿ) ಉನ್ನತಿ<br>(ಸಿ) ಅಭಿವೃದ್ಧಿ (ಡಿ) ಪ್ರಗತಿ<br>***ಉತ್ತರ :*** (ಎ) ಅವನತಿ | |
| 47. | 'ಮುಖಚಂದ್ರ' ಇಲ್ಲಿರುವ ಅಲಂಕಾರ<br>(ಎ) ಉಪಮಾಲಂಕಾರ (ಬಿ) ರೂಪಕಾಲಂಕಾರ<br>(ಸಿ) ದೃಷ್ಟಾಂತಾಲಂಕಾರ (ಡಿ) ಶ್ಲೇಷಾಲಂಕಾರ<br>***ಉತ್ತರ :*** (ಬಿ) ರೂಪಕಾಲಂಕಾರ | |
| 48. | ಸದ್ದು ಮಾಡದಿರು! ಈ ವಾಕ್ಯದಲ್ಲಿ ಬಳಸಿರುವ ಲೇಖನ ಚಿಹ್ನೆ<br>(ಎ) ಉದ್ಧರಣ (ಬಿ) ಪೂರ್ಣವಿರಾಮ<br>(ಸಿ) ಪ್ರಶ್ನಾರ್ಥಕ (ಡಿ) ಆಶ್ಚರ್ಯಸೂಚಕ<br>***ಉತ್ತರ :*** (ಡಿ) ಆಶ್ಚರ್ಯಸೂಚಕ | |
| 49. | 'ಮೂರು' ಸಾಲಿನಿಂದ ಕೂಡಿರುವ ಪದ್ಯ<br>(ಎ) ತ್ರಿಪದಿ (ಬಿ) ದ್ವಿಪದಿ<br>(ಸಿ) ಚೌಪದಿ (ಡಿ) ಷಟ್ಪದಿ<br>***ಉತ್ತರ :*** (ಎ) ತ್ರಿಪದಿ | |
| 50. | 'ಜ್ಞಾನ' ಪದದ ವಿರುದ್ಧಾರ್ಥಕ ಪದ<br>(ಎ) ಸುಜ್ಞಾನ (ಬಿ) ವಿಜ್ಞಾನ<br>(ಸಿ) ಅಜ್ಞಾನ (ಡಿ) ಪರಿಜ್ಞಾನ<br>***ಉತ್ತರ :*** (ಸಿ) ಅಜ್ಞಾನ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | **ವಿಭಾಗ – 'ಸಿ'** | |
| | **ಅಪಠಿತ ಗದ್ಯ :** (ವಾಕ್ಯರೂಪದಲ್ಲಿ ಬರೆದ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 4 × 1 = 4 |
| | ಜಗತ್ತಿನಲ್ಲಿ ಶಕ್ತಿಗೆ ವ್ಯಾಪಕ ಪುರಸ್ಕಾರವಿದೆ. ಶಾರೀರಿಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳು ಒಂದುಗೂಡಿದಾಗ ಶಕ್ತಿಶಾಲಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಕೇವಲ ಶಾರೀರಿಕ ಶಕ್ತಿಯೊಂದರಿಂದಲೇ ಪರಿಪೂರ್ಣತೆ ಅಸಾಧ್ಯ. ಸರ್ವತೋಮುಖ ಬೆಳವಣಿಗೆಯಿಂದ ವ್ಯಕ್ತಿತ್ವದ ಅಭಿವೃದ್ಧಿ ಸಾಧಿತವಾಗುತ್ತದೆ. ಪರಂಪರೆ, ಚರಿತ್ರೆ, ಸಂಸ್ಕೃತಿಯ ಅರಿವಿನೊಂದಿಗೆ ಸಚ್ಚಾರಿತ್ರ್ಯವನ್ನು ಅಳವಡಿಸಿಕೊಂಡಾಗ ಉದ್ದೇಶಿತ ಗುರಿಯನ್ನು ಪ್ರಾಮಾಣಿಕವಾಗಿ ಸಾಧಿಸಬಹುದು. ಮಹಾಭಾರತದಲ್ಲಿ ಶ್ರೀಕೃಷ್ಣ ಅರ್ಜುನನಿಗೆ ಶಕ್ತಿಶಾಲಿಯಾಗೆಂದು ಬೋಧಿಸಿದ. ಸ್ವಾಮಿ ವಿವೇಕಾನಂದರು ಸಿಂಹವಾಣಿಯಿಂದ ಯುವಜನತೆಯನ್ನು ಎಚ್ಚರಿಸಿದರು. ವೈಚಾರಿಕ, ನೈತಿಕ ಸಾಮರ್ಥ್ಯದಿಂದ ಜಗತ್ತನ್ನೇ ಗೆಲ್ಲಬಹುದೆಂದು ಸಾರಿದರು. ಅಜ್ಞಾನ, ಕೀಳರಿಮೆ, ರಾಗದ್ವೇಷಗಳ ಕೂಪದಿಂದ ಹೊರಬಂದು ಉದ್ದೇಶಿತ ಕಾರ್ಯದಲ್ಲಿ ನಿಷ್ಠೆ ಹೊಂದಿದಾಗ ಉಜ್ವಲ ಭವಿಷ್ಯ ರೂಪುಗೊಳ್ಳುತ್ತದೆ. ಆದಕ್ಕೆ ನಮ್ಮೆಲ್ಲರ ಮುಂದಿರುವ ಅಸ್ತ್ರವೇ ಸಶಕ್ತಿ ಮತ್ತು ಆತ್ಮಸ್ಥೈರ್ಯ. ಒಳ್ಳೆಯ ಆಲೋಚನೆ ಮತ್ತು ಕ್ರಿಯಾಶೀಲತೆಯಿಂದ ಶಕ್ತಿಯನ್ನು ಪಡೆಯಬಹುದು. | |
| 51. | ಶಕ್ತಿಶಾಲಿ ವ್ಯಕ್ತಿತ್ವ ಯಾವಾಗ ರೂಪುಗೊಳ್ಳುತ್ತದೆ ?<br>***ಉತ್ತರ :***<br>ಶಾರೀರಿಕ, ಬೌದ್ಧಿಕ, ನೈತಿಕ, ಆಧ್ಯಾತ್ಮಿಕ ಶಕ್ತಿಗಳು ಒಂದುಗೂಡಿದಾಗ ಶಕ್ತಿಶಾಲಿ ವ್ಯಕ್ತಿತ್ವ ರೂಪುಗೊಳ್ಳುತ್ತದೆ. | |
| 52. | ಯುವಜನತೆ ಯಾವುದರಿಂದ ಹೊರ ಬರಬೇಕು ?<br>***ಉತ್ತರ :***<br>ಅಜ್ಞಾನ, ಕೀಳರಿಮ, ರಾಗದ್ವೇಷಗಳ ಕೂಪದಿಂದ ಹೊರಬರಬೇಕು. | |
| 53. | ಶ್ರೀಕೃಷ್ಣ ಅರ್ಜುನನಿಗೆ ಏನೆಂದು ಬೋಧಿಸಿದನು ?<br>***ಉತ್ತರ :***<br>ಶ್ರೀಕೃಷ್ಣ ಅರ್ಜುನನಿಗೆ ಶಕ್ತಿಶಾಲಿಯಾಗೆಂದು ಬೋಧಿಸಿದನು. | |
| 54. | ಶಕ್ತಿಯನ್ನು ಹೇಗೆ ಪಡೆಯಬಹುದು ?<br>***ಉತ್ತರ :***<br>ಒಳ್ಳೆಯ ಆಲೋಚನೆ ಮತ್ತು ಕ್ರಿಯಾಶೀಲತೆಯಿಂದ ಶಕ್ತಿಯನ್ನು ಪಡೆಯಬಹುದು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | **ಗಾದೆಯನ್ನು ವಿಸ್ತರಿಸಿ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 3 = 3 |
| | * ಕೈಕೆಸರಾದರೆ ಬಾಯಿ ಮೊಸರು | |
| | * ತಾ ಕಳ್ಳ; ಪರರ ನಂಬ | |
| | * ಹಾಸಿಗೆ ಇದ್ದಷ್ಟೇ ಕಾಲು ಚಾಚು | |
| | ***ಉತ್ತರ :*** | |
| | ಗಾದೆಯ ಮಹತ್ವದ ವಿವರಣೆ | 1 ಅಂಕ |
| | ಗಾದೆಯ ಅರ್ಥ ವಿವರಣೆ | 1 ಅಂಕ |
| | ಭಾಷಾಶೈಲಿಗೆ, ಪದಬಳಕೆಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 56. | **ಪತ್ರ ಲೇಖನ ಬರೆಯುವುದು : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | ನಿಮ್ಮನ್ನು ಕೋಲಾರದ ಕುವೆಂಪು ನಗರದ 'ಅನಿತ' ಎಂದು ಭಾವಿಸಿಕೊಂಡು, ನಿಮ್ಮ ವಿದ್ಯಾಭ್ಯಾಸದ ಪ್ರಗತಿಯನ್ನು ಕುರಿತು ಬೆಂಗಳೂರಿನ ಶಿವಾಜಿನಗರದಲ್ಲಿರುವ 'ವೆಂಕಟೇಶ' ಎಂಬ ಹೆಸರಿನ ತಂದೆಯವರಿಗೆಗೊಂದು ಪತ್ರ ಬರೆಯಿರಿ. | |
| | **ಅಥವಾ** | |
| | ನಿಮ್ಮನ್ನು ದಾವಣಗೆರೆಯ ಗ್ರಾಮಾಂತರ ಪ್ರೌಢಶಾಲೆಯ 'ಸುರೇಶ' ಎಂದು ಭಾವಿಸಿಕೊಂಡು, ವರ್ಗಾವಣೆ ಪತ್ರವನ್ನು ನೀಡುವಂತೆ ಕೋರಿ ನಿಮ್ಮ ಶಾಲೆಯ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ. | |
| | ***ಉತ್ತರ :*** | |
| | ವೈಯಕ್ತಿಕ ಪತ್ರ : | |
| | ಇಂದ ವಿಳಾಸ, ಸ್ಥಳ, ದಿನಾಂಕ, ಪ್ರಾರಂಭದ ಒಕ್ಕಣೆ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಗೆ ವಿಳಾಸ | 1 ಅಂಕ |
| | ಒಟ್ಟು | 4 ಅಂಕಗಳು |
| | **ಅಥವಾ** | |
| | ವ್ಯಾವಹಾರಿಕ ಪತ್ರ : | |
| | ಇಂದ ವಿಳಾಸ, ಗೆ ವಿಳಾಸ, ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸಹಿಯೊಂದಿಗೆ ಮುಕ್ತಾಯ, ಸ್ಥಳ, ದಿನಾಂಕ | 1 ಅಂಕ |
| | ಒಟ್ಟು | 4 ಅಂಕಗಳು |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 57. | **ಪ್ರಬಂಧ ಬರೆವಣಿಗೆ : (ಯಾವುದಾದರೂ ಒಂದಕ್ಕೆ ಮಾತ್ರ)** | 1 × 4 = 4 |
| | * ಭ್ರಷ್ಟಾಚಾರ ನಿರ್ಮೂಲನೆಯಲ್ಲಿ ಯುವಜನತೆಯ ಪಾತ್ರ | |
| | * ಪರಿಸರ ಸಂರಕ್ಷಣೆಯಲ್ಲಿ ವಿದ್ಯಾರ್ಥಿಗಳ ಪಾತ್ರ | |
| | * ಕ್ರೀಡೆಗಳ ಮಹತ್ವ | |
| | ***ಉತ್ತರ :*** | |
| | ಪೀಠಿಕೆ / ಪ್ರಸ್ತಾವನೆ | 1 ಅಂಕ |
| | ವಿಷಯ ನಿರೂಪಣೆ | 2 ಅಂಕಗಳು |
| | ಭಾಷಾಶೈಲಿಗೆ, ಮುಕ್ತಾಯ / ಉಪಸಂಹಾರ | 1 ಅಂಕ |
| | ಒಟ್ಟು | 4 ಅಂಕಗಳು |